NP – 004

3

St Claret College LIBRARY Bangalore-560013

# I Semester B.B.A. Examination, May 2022
# (NEP Scheme) (2021-22 and Onwards)
## ಕನ್ನಡ ಭಾಷಾ ಪತ್ರ
## ವ್ಯವಹಾರ ನಿರ್ವಹಣಾ ಕನ್ನಡ (Paper – I)

Time : 2½ Hours Max. Marks : 60

I. ಈ ಕೆಳಗಿನ ಪ್ರಶ್ನೆಗಳಲ್ಲಿ **4** ಕ್ಕೆ **80** ಪದಗಳಿಗೆ ಮೀರದಂತೆ ಉತ್ತರಿಸಿ : **(5×4=20)**

1) 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಕವಿತೆಯ ಆಶಯವೇನು ?

2) ಡೈಗ್ಲೋಸಿಯಾ (ದ್ವಿಭಾಷಿತ್ವ) ಎಂದರೇನು ?

3) 'ನಮ್ಮ ನಗರದ ಬದುಕು' ಕವಿತೆಯಲ್ಲಿ ಆಧುನಿಕತೆ ಹೇಗೆ ಚಿತ್ರಿತಗೊಂಡಿದೆ ?

4) ಈಗ ಸಕಲವೂ ಸ್ಮಾರ್ಟ್ ಆಗಿದೆಯಾ ? ವಿವರಿಸಿ.

5) ವಾರೆನ್ ಬಫೆಟ್‌ನ ವ್ಯಕ್ತಿತ್ವವನ್ನು ಪರಿಚಯಿಸಿ.

6) ಹೊಸ ಬ್ಯಾಂಕ್‌ಗಳ ಉದಯಕ್ಕೆ ಪೂರಕ ಅಂಶಗಳನ್ನು ಬರೆಯಿರಿ.

II. ಈ ಕೆಳಗಿನ ಪ್ರಶ್ನೆಗಳಲ್ಲಿ **2** ಕ್ಕೆ **160** ಪದಗಳಿಗೆ ಮೀರದಂತೆ ಉತ್ತರಿಸಿ : **(10×2=20)**

1) ನೀರಿನ ಹೆಸರಿನಲ್ಲಿ ನಡೆಯುತ್ತಿರುವ ಹುನ್ನಾರಗಳನ್ನು ಪಠ್ಯದ ಹಿನ್ನೆಲೆಯಲ್ಲಿ ವಿಶ್ಲೇಷಿಸಿರಿ.

2) ಆರೋಗ್ಯ ಕೇಂದ್ರಗಳಿಗೆ ಬೇಕಾಗಿದ್ದ ಆಸ್ಪತ್ರೆಗಳು ಶೋಷಣೆಯ ಕೇಂದ್ರಗಳಾಗಿವೇ ? ಪ್ರಸ್ತುತ ವಿದ್ಯಾಮಾನಗಳ ಹಿನ್ನೆಲೆಯಲ್ಲಿ ವಿವರಿಸಿ.

3) ಹೆಣ್ಣು ಮಕ್ಕಳ ಸಂಘಟನೆಯಾಗಿ 'ಚರಕ' ಸಂಸ್ಥೆಯನ್ನು ಪಠ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.

III. ಕೆಳಕಂಡ ಪಠ್ಯವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ ಬರೆದು ಸೂಕ್ತ ಶೀರ್ಷಿಕೆ ನೀಡಿ : **(1×3=3)**

ಕನ್ನಡ ಡಿಂಡಿಮ ಬಾರಿಸಿ, ಸತ್ತಂತಿಹರನು ಬಡಿದೆಚ್ಚರಿಸಬೇಕು ಎಂಬ ಕವಿವಾಣಿಯನ್ನು ಭಾವನಾತ್ಮಕವಾಗಿಯಲ್ಲದೆ, ಆಳವಾದ ಆಲೋಚನೆಯಿಂದ ಅರ್ಥಮಾಡಿಕೊಳ್ಳುವ ಅಗತ್ಯ ಈಗ ಹೆಚ್ಚಾಗಿದೆಯಲ್ಲವೆ ? ಕುವೆಂಪು ಕನ್ನಡ ಡಿಂಡಿಮವನ್ನು 'ನುಡಿಸು' ಎನ್ನದೆ 'ಬಾರಿಸು' ಎಂದಿರುವುದೇಕೆ ? ಇದು ಕನ್ನಡಿಗರು ಜಡತ್ವದಿಂದ ನಿದ್ರಿಸುವ

ತೀವ್ರತೆಯನ್ನು ಬೆರಳು ಮಾಡಿ ತೋರುತ್ತಿದೆಯಲ್ಲವೆ ? 'ಸತ್ತಂತಿರುವ' ನಮ್ಮನ್ನು ಆವರಿಸಿರುವ 'ಜಡತ್ವ' ಯಾವ ಬಗೆಯದೆಂಬುದನ್ನು ನಾವು ಮತ್ತು ನಮ್ಮನ್ನು ಆಳುತ್ತಿರುವವರು ಒಟ್ಟಾಗಿ ಪರಿಶೀಲಿಸಿಕೊಳ್ಳಬೇಕಾಗಿದೆ. ಕನ್ನಡಿಗರ ಅಸ್ಮಿತೆಯ ಪ್ರಶ್ನೆ 'ಗ್ಲೋಬಲ್ ವಿಲೇಜ್'ನ ವರ್ತಮಾನದಲ್ಲಿ ಅಸಂಗತವೆನಿಸಿಕೊಳ್ಳುವ ಸಂದರ್ಭದಲ್ಲಿ ನಾವಿದ್ದೇವೆ. ನಮ್ಮ ಅಸ್ತಿತ್ವದ ಪ್ರಶ್ನೆಯ ಜೊತೆಜೊತೆಯಲ್ಲೇ ಹೊರ ಜಗತ್ತಿನೊಂದಿಗೆ ನಮ್ಮ ಕೂಡು ಕೊಳ್ಳುವಿಕೆ ನಮ್ಮ ನಿತ್ಯದ ಬದುಕಿನ ಮೇಲೆ ಪ್ರಭಾವ ಬೀರುತ್ತಿರುವ, ನಮ್ಮ ಬದುಕನ್ನು ನಿಯಂತ್ರಿಸುತ್ತಿರುವ ಅನೇಕ ಸಂಗತಿಗಳು ಬೀರುತ್ತಿರುವ ಪರಿಣಾಮವನ್ನು ತೆರೆದೆದೆಯಿಂದ ನಾವೆಲ್ಲರೂ ಕಾಣಬೇಕಾಗಿದೆ. ನಮ್ಮ ಏಳಿಗೆಯ ಪ್ರಶ್ನೆಯು ಆರ್ಥಿಕ, ಸಾಮಾಜಿಕ, ರಾಜಕೀಯ ಆಯಾಮಗಳ ಸೀಮಿತತೆಗೆ ಒಳಪಟ್ಟಿರುವುದಾದರೂ ಒಂದು ನಾಡಿನ ಏಳಿಗೆಯು ಅಲ್ಲಿನ ಜನರ ಕಲಿಕೆ, ದುಡಿಮೆ, ಛಲ ಮತ್ತು ಒಗ್ಗಟ್ಟುಗಳೆಂಬ ಚತುರ್ಮುಖ ಆಯಾಮದಿಂದ ಹೊರಗಿರುವುದಿಲ್ಲ. ನಮ್ಮ ತಾಯ್ನುಡಿಯ ಸುತ್ತಲೇ ಉಳಿದೆಲ್ಲ ವ್ಯವಸ್ಥೆಗಳನ್ನು ನಾವೂ ರೂಪಿಸಿಕೊಂಡಿರುತ್ತೇವೆ. ನಮ್ಮ ಕನ್ನಡ 'ಅನ್ನದ ಭಾಷೆ' ಆಗುವ ಬಗೆ ಹೇಗೆ ? ಯಾವುದೇ ಭಾಷೆಯೊಂದಿಗೆ ಪೈಪೋಟಿ ನಡೆಸುತ್ತಲೇ ನಮ್ಮ ಅಸ್ತಿತ್ವವನ್ನು ಕಾಪಾಡುವುದು ಹೇಗೆ ? ಇದು ಈ ಹೊತ್ತು ನಾವು ಎದುರಿಸಬೇಕಾಗಿರುವ ಬಹುಮುಖ್ಯವಾದ ಪ್ರಶ್ನೆ.

IV. ಸಂಕ್ಷೇಪಿಸಿದ ಬರಹ ಆಧರಿಸಿ **ಎರಡು** ಪ್ರಶ್ನೆ ರೂಪಿಸಿ. **(1×2=2)**

V. ಇವುಗಳಲ್ಲಿ **ಎರಡು** ಪದಗಳನ್ನು ಸ್ವಂತ ವಾಕ್ಯ ರಚಿಸಿ : **(1×2=2)**

1) ಅಟೆಂಡರ್

2) ಗ್ರಾಮೀಣ

3) ಕೈಯ ಹಿಡಿದು

4) ಶ್ರೇಷ್ಠವಾದ.

VI. ನಿಮ್ಮ ಕಾಲೇಜಿನಲ್ಲಿ ಏರ್ಪಡಿಸಿದ್ದ ರಾಜ್ಯೋತ್ಸವವನ್ನು ಕುರಿತು ನಿಮ್ಮ ಗೆಳೆಯ/ಗೆಳತಿಗೆ ಪತ್ರ ಬರೆಯಿರಿ. **(1×4=4)**

VII. ಇವುಗಳಲ್ಲಿ **ನಾಲ್ಕು** ಪದಗಳಿಗೆ ಅರ್ಥ ಬರೆಯಿರಿ : **(1×4=4)**

1) ರಿಪು
2) ಅರಿವೆ
3) ದುಬಾರಿ
4) ಮಾರಿ
5) ಸೊಣಗ
6) ನಮೂನೆ.

VIII. ಇವುಗಳಿಗೆ **ಒಂದೊಂದು** ಸರಿ ಉತ್ತರ ಗುರುತಿಸಿ, **ಎಲ್ಲಾ** ಪ್ರಶ್ನೆಗಳಿಗೆ ಉತ್ತರಿಸಿ : **(1×5=5)**

1) ಕೇಂದ್ರ ಸರಕಾರದ ಅಧಿಕೃತ ಭಾಷಾ ನಿಯಮ ಜಾರಿಯಾದ ವರ್ಷ

ಎ) 1975 ಬಿ) 1976 ಸಿ) 1984 ಡಿ) 1982

2) ವೆಂಕಟೇಶ್‌ಮೂರ್ತಿ ಮಗಳ ಹೆಸರೇನು ?

ಎ) ತನುಜ ಬಿ) ವನಜ ಸಿ) ಪದ್ಮಜ ಡಿ) ಜಲಜ

3) 'ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ' ಕವಿತೆಯ ಕರ್ತೃ ಯಾರು ?

ಎ) ಚನ್ನವೀರ ಕಣವಿ ಬಿ) ಮಧುರ ಚೆನ್ನ

ಸಿ) ಸೋಮಶೇಖರ ಇಮ್ರಾಪುರ ಡಿ) ದ. ರಾ. ಬೇಂದ್ರೆ

4) ಕರ್ನಾಟಕ ಎಂದು ನಾಮಕರಣವಾದ ವರ್ಷ

ಎ) 1952 ಬಿ) 1956 ಸಿ) 1973 ಡಿ) 1975

5) ಗಮ್‌ಛಾ ಎಂದರೇನು ?

ಎ) ಶಾಲು ಬಿ) ಪಂಚೆ ಸಿ) ಅಂಗವಸ್ತ್ರ ಡಿ) ತಲೆವಸ್ತ್ರ

---